# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2023-24ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ
## S.S.L.C. MODEL QUESTION PAPER – 2023-24

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : First Language — KANNADA

ಸಮಯ : 3 ಗಂಟೆ 15 ನಿಮಿಷಗಳು ] **ವಿಷಯ ಸಂಕೇತ : 01-K**

ಗರಿಷ್ಠ ಅಂಕಗಳು : 100 ] **Subject Code : 01-K**

**CCE-RF : ಶಾಲಾ ವಿದ್ಯಾರ್ಥಿಗಳು / Regular Fresh**

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

www.careerindia.com

CAREERINDIA



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ

(ಎ) ೩೪

(ಬಿ) ೨೫

(ಸಿ) ೧೦

(ಡಿ) ೦೫

2. 'ತನ್ಮಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಯಣ್ ಸಂಧಿ

(ಬಿ) ಅನುನಾಸಿಕ ಸಂಧಿ

(ಸಿ) ಜಶ್ತ್ವ ಸಂಧಿ

(ಡಿ) ಶ್ಚುತ್ವ ಸಂಧಿ

www.careerindia.com

CAREERINDIA



3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ಉದ್ಧರಣ ಚಿಹ್ನೆ

(ಬಿ) ವಾಕ್ಯವೇಷ್ಟನ ಚಿಹ್ನೆ

(ಸಿ) ಆವರಣ ಚಿಹ್ನೆ

(ಡಿ) ವಿವರಣಾತ್ಮಕ ಚಿಹ್ನೆ

4. 'ಮೈಮುಚ್ಚು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ತತ್ಪುರುಷ ಸಮಾಸ

(ಬಿ) ಅಂಶಿ ಸಮಾಸ

(ಸಿ) ಗಮಕ ಸಮಾಸ

(ಡಿ) ಕ್ರಿಯಾ ಸಮಾಸ

www.careerindia.com

CAREERINDIA



5. ‘ಜಾಣತನ’ ಪದವು ತದ್ಧಿತಾಂತದ ಈ ಪ್ರಕಾರಕ್ಕೆ ಉದಾಹರಣೆಯಾಗಿದೆ

(ಎ) ತದ್ಧಿತಾಂತ ನಾಮ

(ಬಿ) ತದ್ಧಿತಾಂತ ಭಾವನಾಮ

(ಸಿ) ತದ್ಧಿತಾಂತಾವ್ಯಯ

(ಡಿ) ಕೃದಂತಾವ್ಯಯ

6. ‘ಬೆಟ್ಟವನ್ನು’ ಈ ಪದದಲ್ಲಿರುವ ವಿಭಕ್ತಿ

(ಎ) ಪಂಚಮೀ

(ಬಿ) ಪ್ರಥಮಾ

(ಸಿ) ದ್ವಿತೀಯಾ

(ಡಿ) ಷಷ್ಠೀ

www.careerindia.com

CAREERINDIA



**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4**

7. ಮಕ್ಕಳುಮರಿ : ಜೋಡುನುಡಿ :: ಮೊತ್ತಮೊದಲು : .......................... .

8. ಒಳ್ಳೆಯ : ಗುಣವಾಚಕ :: ಇನಿತು : .......................... .

9. ಸಂದೇಹ : ಸಂದೆಯ :: ಕೋಕಿಲಾ : .......................... .

10. ನಾನು : ಉತ್ತಮ ಪುರುಷ :: ಅವನು : ................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7 × 1 = 7**

11. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?

12. ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ ?

www.careerindia.com

CAREERINDIA



13. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

14. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು ?

15. ಶ್ರೀಕೃಷ್ಣ ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು ?

16. ಶ್ರೀರಾಮನ ತಾಯಿಯ ಹೆಸರೇನು ?

17. ಕಾರ್ತೀಕಮಾಸದಲ್ಲಿ ಮಲೆನಾಡಿನಲ್ಲಿ ದೀಪವನ್ನು ಹೇಗೆ ಉರಿಸುತ್ತಿದ್ದರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?

19. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳಾವುವು ?

www.careerindia.com

CAREERINDIA



20. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?

21. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ?

22. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?

23. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವನ್ನು ತಿಳಿಸಿ.

25. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

27. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು ?

www.careerindia.com

CAREERINDIA



**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

28. ಪು.ತಿ. ನರಸಿಂಹಾಚಾರ್

29. ದ.ರಾ. ಬೇಂದ್ರೆ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :**

**1 × 3 = 3**

30. ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದಗೇ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

31. "ನುಡಿದರೆ ಮುತ್ತಿನ ಹಾರದಂತಿರಬೇಕು."

www.careerindia.com

CAREERINDIA



**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :**

**1 × 3 = 3**

32. ಆಳಾಗಬಲ್ಲವನು; ಅರಸನಾಗಬಲ್ಲ.

**ಅಥವಾ**

ತಾಯಿಯಂತೆ ಮಗಳು; ನೂಲಿನಂತೆ ಸೀರೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಮನುಷ್ಯನಂತೆ ಟೊಪ್ಪಿಗೆಯಲ್ಲವೆ ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ."

34. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು."

35. "ಹುಸಿಯದ ಬೇಹಾರಿಯೇ ಇಲ್ಲ."

36. "ಜೀವ ಸತ್ತು ಹೋಗುವುದು ಗೊತ್ತ"

[ Turn over

www.careerindia.com

CAREERINDIA



37. “ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ”

38. “ವಿದ್ಯಾಧನಮೆ ಧನಮಪ್ಪುದು”

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

39. ಹಸುರಾಗಸ; ...................................................

...................................................

...................................................

................................................... ಬಿಸಿಲೂ!

**ಅಥವಾ**

ಹೊಸ ಹೂವಿನ ...................................................

...................................................

...................................................

................................................... ಯುಸಿರೂ!

www.careerindia.com

CAREERINDIA



**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 × 4 = 4**

40. ಕಾದದಿರೆನಜ್ಜ ಪಾಂಡವ ।
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ ॥
ಣಾದೆನದಱೆಂದೆ ಪಾಂಡವ
ರ್ಗಾದುದು ಮೇಣಾಯ್ತು ಕೌರವಂಗವನಿತಳಂ ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?

**ಅಥವಾ**

ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

www.careerindia.com

CAREERINDIA



42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಜಿ.ಎಸ್. ಶಿವರುದ್ರಪ್ಪನವರ ಆಶಯವಾಗಿದೆ ? ತಿಳಿಸಿ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

43. ಕೋತಿ ಕೋಣವನ್ನು ಎಷ್ಟೆಲ್ಲಾ ಗೋಳುಹುಯಿದರು ಕೋಪಿಸಿಕೊಳ್ಳದೆ ಶಾಂತಿಯಿಂದ ಎಲ್ಲವನ್ನೂ ಸಹಿಸಿಕೊಂಡಿರುತ್ತಿತ್ತು. ಕೋಣಕ್ಕೆ ಕೋಪ ಬರದೆ ಹೋದರೂ ಕಪಿ ಮಾಡುತ್ತಿದ್ದ ಅತಿಯಾದ ಚೇಷ್ಟೆಗಳನ್ನು ನೋಡಿ ಇತರ ಪ್ರಾಣಿಗಳಿಗೆ ರೋಸಿಹೋಗಿತ್ತು. "ಈ ಕಪಿ ನಮಗೆ

www.careerindia.com

CAREERINDIA



ಹೀಗೆನಾದರೂ ಆಡಬೇಕು! ಆಗ ಅದಕ್ಕೆ ಸರಿಯಾದ ಗತಿ ತೋರಿಸುತ್ತೇವೆ!'' ಎಂದು ಅವು ಹಲ್ಲು ಮಸೆಯುತ್ತಿದ್ದವು.

ಕೋತಿ ಅದನ್ನೆಲ್ಲ ಲಕ್ಷಿಸಲಿಲ್ಲ. ''ನನಗೆ ಈ ಸಾಧುವಾದ ಕೋಣ ದೊರಕಿರುವಾಗ, ನಾನು ನಿಮ್ಮ ತಂಟೆಗೆ ಏಕೆ ಬರಲಿ ?'' ಎಂದು ಕೇಕೆ ಹಾಕಿ ನಗುತ್ತ, ಕೋಣವನ್ನು ಕೀಟಲೆ ಮಾಡುತ್ತಲೇ ಇತ್ತು. ಅದೇ ವನದಲ್ಲಿ ಒಂದು ವೃಕ್ಷದೇವತೆ ಇತ್ತು. ಅದು ಕಪಿಯ ತುಂಟಾಟವನ್ನೂ ನೋಡುತ್ತಿತ್ತು. ಕೋಣನ ಸೈರಣೆಯನ್ನೂ ನೋಡುತ್ತಿತ್ತು. ಕಡೆಗೆ ಒಂದು ದಿನ ತಡೆಯಲಾರದೆ ''ಅಯ್ಯಾ ಕೋಣ ? ಮಹಾಬಲಶಾಲಿಯಾದ ನೀನೆಲ್ಲಿ ? ಕ್ಷುದ್ರವಾದ ಈ ಕಪಿಯೆಲ್ಲಿ ? ಅದರ ಅಪರಾಧಗಳನ್ನು ನೀನೇಕೆ ಸಹಿಸಿಕೊಂಡಿದ್ದೀಯಾ ? ಒಂದು ಸಲ ಕೊಂಬಿನಿಂದ ಝಾಡಿಸಿ ಒಗೆದು, ಕಾಲಿನ ಗೊರಸಿಂದ ಒರೆಸಿ ಬಿಡು!'' ಎಂದಿತು.

ಅದಕ್ಕೆ ಆ ಕೋಣ ನಗುನಗುತ್ತ ''ವೃಕ್ಷ ದೇವತೆಯೇ! ನಾನು ಹಿಂದಿನ ಜನ್ಮದಲ್ಲಿ ಏನು ತಪ್ಪು ಮಾಡಿದ್ದೆನೋ, ಈ ಜನ್ಮದಲ್ಲಿ ಕೋಣನಾಗಿ ಹುಟ್ಟಿದ್ದೇನೆ. ಈ ಜನ್ಮದಲ್ಲಿ ಮತ್ತೆ

[ Turn over

www.careerindia.com

CAREERINDIA



ತಪ್ಪು ಮಾಡಿದರೆ, ಮುಂದಿನ ಜನ್ಮದಲ್ಲಿ ನಾನು ಏನಾಗಿ ಹುಟ್ಟುತ್ತೇನೆಯೋ, ಯಾರು ಬಲ್ಲರು ?" ಎಂದಿತು.

***ಪ್ರಶ್ನೆಗಳು:***

ಅ) ವೃಕ್ಷದೇವತೆಯ ಮಾತಿಗೆ ಕೋಣ ಕೊಟ್ಟ ಉತ್ತರವೇನು ?

ಬ) ವೃಕ್ಷದೇವತೆ ಕೋಣವನ್ನು ಏನೆಂದು ಪ್ರಶ್ನಿಸಿತು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : $1 \times 5 = 5$**

44. ನಿಮ್ಮನ್ನು ಬಾಗಲಕೋಟೆಯ ನಿವಾಸಿ 'ಪ್ರಮೋದ' ಎಂದು ಭಾವಿಸಿಕೊಂಡು, 'ಗಾಳಿಯ ರಭಸಕ್ಕೆ ವಿದ್ಯುತ್ ಕಂಬದ ಮೇಲೆ ಬಿದ್ದಿರುವ ಮರವನ್ನು ತೆರವುಗೊಳಿಸುವಂತೆ' ಕೋರಿ 'ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯ ಎಂಜಿನಿಯರ್'ರವರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ರವಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ನಡೆಯುವ 'ಪೋಷಕರ ಸಭೆ'ಗೆ ಹಾಜರಾಗುವಂತೆ ಕರಕಳ್ಳಿ ಗ್ರಾಮದ ನಿವಾಸಿಯಾದ 'ಮಡಿವಾಳಪ್ಪ' ಎಂಬ ಹೆಸರಿನ ತಂದೆಯವರಿಗೆ ಪತ್ರವನ್ನು ಬರೆಯಿರಿ.

www.careerindia.com

CAREERINDIA



**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 × 5 = 5**

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ.

**ಅಥವಾ**

ರಾಷ್ಟ್ರೀಯ ಬಾಹ್ಯಾಕಾಶ ದಿನ.

www.careerindia.com

SPACE FOR ROUGH WORK
www.careerindia.com